ಓಶೋ ಹೇಳುತ್ತಾನೆ, 'ಮನುಷ್ಯನ ಅತ್ಯುತ್ತಮ ಕೆಲಸವು ಧ್ಯಾನಸ್ಥ ಸ್ಥಿತಿಯಿಂದ ಹೊರಬರುತ್ತದೆ.' ಮನುಷ್ಯನು ನಿಜವಾಗಿಯೂ ತನ್ನಷ್ಟಕ್ಕೇ ತಾನಿದ್ದಾಗ ಅವನ ಸ್ವಂತಿಕೆ ಹೊರ ಹೊಮ್ಮುತ್ತದೆ. ಹಾಗೂ ಅವನ ಕುಶಲತೆಯು ವಿಶಿಷ್ಟ ಶೈಲಿಯಲ್ಲಿ ಮೂಡುತ್ತದೆ ಎಂಬುದು ಓಶೋ ಚಿಂತನೆ. ಅಮೆರಿಕಾದ ಖ್ಯಾತ ಬರಹಗಾರ ವಿಲಿಯಂ ಜಿನ್ಸಾರ್ ಹೇಳಿದ್ದಾರೆ, 'ಬರವಣಿಗೆ ಒಂದು ಕರಕುಶಲ ಕ್ರಿಯೆ, ಕಲೆಯ ಹೆಸರಿನಲ್ಲಿ ಸುಮ್ಮನೆ ಏನೋ ಒಂದನ್ನು ಕೊಟ್ಟುಬಿಡುವುದಲ್ಲ. ಒಂದು ಕಲೆಯಲ್ಲಿ ಸ್ಫೂರ್ತಿ ಇಲ್ಲದ ಕಾರಣ ತನ್ನ ಕರಕುಶಲತೆಯಿಂದ ಓಡಿಹೋಗುವ ವ್ಯಕ್ತಿ ತನ್ನನ್ನು ತಾನು ವಂಚಿಸಿಕೊಳ್ಳುತ್ತಿದ್ದಾನೆ, ಒಳಗಿನಿಂದ ತನ್ನನ್ನು ತಾನೇ ನಾಶ ಮಾಡಿಕೊಳ್ಳುತ್ತಿದ್ದಾನೆ'.

'ಜಗತ್ತಿಗೆ ನಾನು ಬಂದ ಉದ್ದೇಶವೇನು? ಏನು ಮಾಡಿದರೆ ನಾನು ಸಂಪೂರ್ಣ ತೊಡಗಿಕೊಳ್ಳಬಲ್ಲೆ' ಎಂದು ಅರಿವಾಗುವುದೇ ಎಷ್ಟೋ ಬಾರಿ ನಮ್ಮ ಕನಸಾಗಿರುತ್ತದೆ. ಬಹಳಷ್ಟು ಬಾರಿ ಅದು ಕನಸಾಗಿಯೇ ಉಳಿದು ಹೋಗುತ್ತದೆ. ನನಗೆ ಒಬ್ಬ ಕವಿ ಆಗುವುದರೊಟ್ಟಿಗೆ ಹಲವಾರು ಕನಸುಗಳಿವೆ. ಸದ್ಯಕ್ಕೆ ಅಸಾಧ್ಯ ಎನಿಸುವ ಆ ದೊಡ್ಡ ನನಸಿನ ಹಾದಿಯಲ್ಲಿ ಪಯಣಿಸುತ್ತ ನನ್ನ ಬೇರೆಲ್ಲ ಪುಟ್ಟ ಕನಸುಗಳನ್ನು ಹೊತ್ತು ಸಾಗುವುದೇ ನನ್ನ ಕನಸು. ತೇಲಾಡುವುದೇ ಕನಸಿನ ಗುಣ. ಕನಸುಗಳು ತೇಲುತ್ತಾ ಸಾಗಲಿ. ಆದರೆ, ತೇಲುವ ಕನಸುಗಳನ್ನು ಹಾರಿ ಹೋಗದಂತೆ ಕಾಪಾಡಿಕೊಳ್ಳಬೇಕು. ಕನಸುಗಳನ್ನು ಹಂತ ಹಂತವಾಗಿ ನನಸಾಗಿಸುತ್ತಾ ಬರಬೇಕು. ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು ಹೇಳಿದಂತೆ, 'ಕನಸು ನನಸಾಗಲು ಮೊದಲು ಕನಸು ಕಾಣಬೇಕು!'

ಈ ಕನಸುಗಳ ತೇಲಾಟದಲ್ಲಿ ನನಗೆ ಒಂದು ಸುಂದರ ಪದ್ಯ ಸಿಕ್ಕಿತು. ಅದು ಶ್ರೀ ಚಿನ್ಮಯ್ ಅವರದು. ಇವರು ಕವಿ, ಅಧ್ಯಾತ್ಮ ಗುರು.

ನನ್ನ ಮನಸು ಅರಿಯಬಯಸುತ್ತದೆ
ನನ್ನ ಕನಸುಗಳೆಲ್ಲವನ್ನೂ.

ನನ್ನ ಹೃದಯ ಪ್ರೀತಿಸಲು ಬಯಸುತ್ತದೆ
ನನ್ನ ಕನಸುಗಳೆಲ್ಲವನ್ನೂ.

ನನ್ನ ಆತ್ಮವು ಪೂರೈಸಬಯಸುತ್ತದೆ
ನನ್ನ ಕನಸುಗಳೆಲ್ಲವನ್ನೂ.

**ಕುಂಕುಮಾ ಕೊಡ್ಲೆಕೆರೆ**

ಮೂಲತಃ ಗೋಕರ್ಣದವರಾದ ಲೇಖಕಿ ಪ್ರಸ್ತುತ ನೆಲೆಸಿದ್ದು ಬೆಂಗಳೂರಿನಲ್ಲಿ. ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಪದವೀಧರೆಯಾದ ಅವರು ವೃತ್ತಿಯನ್ನು ಆರಂಭಿಸಿದ್ದು ಸಾಫ್ಟ್‌ವೇರ್ ಉದ್ಯೋಗಿಯಾಗಿ. ಸೌದಿ ಅರೇಬಿಯಾದಲ್ಲಿ ಕೆಲ ಕಾಲ ನೆಲಸಿದ್ದಾಗ ಟೋಸ್ಟ್‌ಮಾಸ್ಟರ್ಸ್ ಭಾಷಣ ಸ್ಪರ್ಧೆಯಲ್ಲಿ ಡಿವಿಷನ್ ಮಟ್ಟದಲ್ಲಿ ಗೆದ್ದಿದ್ದಾರೆ. ಕುಂಕುಮಾ ಅವರ ಲೇಖನಗಳು ಹಲವಾರು ಪತ್ರಿಕೆ, ಅಂತರ್ಜಾಲ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.